# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಸಿಡಿ/640/2013/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 23/02/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಅಶೋಕ್ ಕುಮಾರ್.ಜೆ, ನಂ. 151, ಗೋವಿಂದಪ್ಪ ಬಡಾವಣೆ, ನಾಗಶೆಟ್ಟಿಹಳ್ಳಿ, ಆರ್.ಎಂ.ವಿ 2ನೇ ಹಂತ, ಬೆಂಗಳೂರು-94 ರವರು ಸಲ್ಲಿಸಿದ ದೂರಿನನ್ವಯ ನಿಯಮಬಾಹಿರವಾಗಿ ಫಲಾನುಭವಿಗಳಿಗೆ ಹಂಚಲಾದ ನಿವೇಶನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

1. ಪ್ರಕರಣದ ದೂರುದಾರರಾದ ಶ್ರೀ ಅಶೋಕ್ ಕುಮಾರ್.ಜೆ, ನಂ. 151, ಗೋವಿಂದಪ್ಪ ಬಡಾವಣೆ, ನಾಗಶೆಟ್ಟಿಹಳ್ಳಿ, ಆರ್.ಎಂ.ವಿ 2ನೇ ಹಂತ, ಬೆಂಗಳೂರು-94 ರವರು ಈ ಸಂಸ್ಥೆಯಲ್ಲಿ (1) ಶ್ರೀ ಬಸಪ್ಪ, ಉಪಕಾರ್ಯದರ್ಶಿ-1, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಕುಮಾರ ಪಾರ್ಕ್ ಪಶ್ಚಿಮ, ಟಿ. ಚೌಡಯ್ಯ ರಸ್ತೆ, ಬೆಂಗಳೂರು ಮತ್ತು (2) ಶ್ರೀ ಹನುಮಯ್ಯ, ಗುಮಾಸ್ತ, ಉಪಕಾರ್ಯದರ್ಶಿ-1 ರವರ ಕಛೇರಿ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಕುಮಾರ ಪಾರ್ಕ್ ಪಶ್ಚಿಮ, ಟಿ. ಚೌಡಯ್ಯ ರಸ್ತೆ, ಬೆಂಗಳೂರು ಮತ್ತು (3) ಶ್ರೀ ರಂಗನಾಥ್, ತಹಶೀಲ್ದಾರ್, ಯಲಹಂಕ, ಬೆಂಗಳೂರು ಉತ್ತರ (ಹೆಚ್ಚುವರಿ), ಬೆಂಗಳೂರು ಇವರುಗಳ ವಿರುದ್ಧ ದೂರೊಂದನ್ನು ಸಲ್ಲಿಸಿದ್ದು, ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.
2. ದೂರಿನ ಸಾರಾಂಶ ಕರ್ನಾಟಕ ರಾಜ್ಯ ಸರ್ಕಾರದ ಆದೇಶ ದಿನಾಂಕ 22/05/2001 ಹಾಗೂ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ರವರ ಅಧಿಕೃತ ಜ್ಞಾಪನ ಪತ್ರ ದಿನಾಂಕ 06/06/2001 ರನ್ವಯ ಯಲಹಂಕ ಹೋಬಳಿಯ ಮೇಡಿ ಅಗ್ರಹಾರ ಸರ್ವೇ ನಂ-24 ರಲ್ಲಿ 30 x 40 ಅಳತೆಯ 206 ನಿವೇಶನಗಳನ್ನು 2008-12 ರವರೆಗೆ ದಲಿತ ಕ್ರಿಯಾ ಸಮಿತಿಯ ನಿವೇಶನ ರಹಿತ ಸದಸ್ಯರಿಗೆ ಹಂಚಿಕೆ ಮಾಡಿರುತ್ತಾರೆ. ಆದರೆ, ತಹಶೀಲ್ದಾರ್ ರವರು ನಿವೇಶನ ಹಂಚಿಕೆ ಮಾಡುವ ಮುನ್ನ ಫಲಾನುಭವಿಯ ಯಾವುದೇ ಸ್ಪಷ್ಟ ದಾಖಲೆಗಳನ್ನು ಪರಿಶೀಲಿಸದೆ ಸರ್ಕಾರಿ ನೌಕರರಿಗೆ ಮತ್ತು ಪತಿ ಮತ್ತು ಪತ್ನಿಗೆ ನಿವೇಶನ ಹಂಚಿಕೆ ಮಾಡಿರುವುದು ಕಂಡು ಬಂದಿರುತ್ತದೆ. ನಿವೇಶನ ಹಂಚುವಾಗ ಹಂಚಿಕೆ ಪತ್ರದಲ್ಲಿ ಪತಿ ಮತ್ತು ಪತ್ನಿ ಇಬ್ಬರಿಗೂ ಜಂಟಿ ಹೆಸರಿನಲ್ಲಿ ಹಕ್ಕು ಪತ್ರ ಕೊಡಲು ಷರತ್ತು ಇದ್ದು ತಹಸೀಲ್ದಾರ್‌ರವರು ನೇರವಾಗಿ ಉಲ್ಲಂಘಿಸಿರುತ್ತಾರೆ. ಆಗಿರುವ ಅನಾಹುತದ ಬಗ್ಗೆ ಮನವಿ ಮಾಡಿಕೊಂಡಿದ್ದು ತಹಶೀಲ್ದಾರ್‌ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ತನಿಖೆಗೆ ಒಳಪಡಿಸಿ ಕ್ರಮ ಕೈಗೊಳ್ಳಬೇಕಾಗಿ ಹಾಗೂ ಸರ್ಕಾರಿ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಕೋರಿರುತ್ತಾರೆ. ದೂರಿನೊಂದಿಗೆ

ನಿವೇಶನ ಹಂಚಿಕೆಯಲ್ಲಿ ಸರ್ಕಾರ ವಿಧಿಸಿರುವ ಷರತ್ತುಗಳ ಪ್ರತಿಯನ್ನು ತಹಶೀಲ್ದಾರ್ ರವರಲ್ಲಿ ಮಾಡಿಕೊಂಡಿರುವ ಮನವಿಯ ನಕಲು ಪ್ರತಿಯನ್ನು ಸರ್ಕಾರಿ ನೌಕರರಿಗೆ ಹಂಚಿಕೆ ಮಾಡಿರುವ ಪಟ್ಟಿ ಹಾಗೂ ಗಂಡ-ಹೆಂಡತಿ ಇಬ್ಬರಿಗೂ ಹಂಚಿಕೆಯಾಗಿರುವ ನಿವೇಶನ ಸಂಖ್ಯೆ ಮತ್ತು ಹೆಸರು ಇರುವ ಪಟ್ಟಿಯನ್ನು ಲಗತ್ತಿಸಿರುತ್ತಾರೆ.

3. ದೂರಿನ ಜೊತೆ ಲಗತ್ತಿಸಿರುವ ದಾಖಲೆ ಪರಿಶೀಲಿಸಲಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಅಧಿಕೃತ ಜ್ಞಾಪನದ ಪ್ರತಿ ಹಾಜರ್ಪಡಿಸಿದ್ದು, ಸದರಿ ದಾಖಲೆಯಲ್ಲಿ ನಿವೇಶನ ಹಂಚುವಾಗ ವಿಧಿಸಿರುವ ಷರತ್ತುಗಳ ಪ್ರಕಾರ ನಿವೇಶನ ವಿತರಿಸಲು ಆದೇಶವಾಗಿರುತ್ತದೆ. ಸದರಿ ಷರತ್ತುಗಳನ್ನು ಪಾಲಿಸಲು 3ನೇ ಎದುರುದಾರರವರು ಉಲ್ಲಂಘಿಸಿದ ಬಗ್ಗೆ ದೂರಿನಲ್ಲಿ ನಮೂದಿಸಿರುತ್ತಾರೆ.

4. ವಿವಿಧ ಪ್ರದೇಶಗಳಲ್ಲಿ ಬಿ.ಡಿ.ಎ ಬಡಾವಣೆಗಳನ್ನು ನಿರ್ಮಿಸಲು ಗುಡಿಸಲುಗಳನ್ನು ನೆಲಸಮಗೊಳಿಸಲಾಗಿ ಪ್ರಾಧಿಕಾರವು ಪುನರ್ವಸತಿ ಕಲ್ಪಿಸುವ ವೇಳೆ ನಿವೇಶನ ಕಳೆದುಕೊಂಡವರ ಪಟ್ಟಿಯನ್ನು, ದಲಿತ ಕ್ರಿಯಾ ಸಮಿತಿಯು ನೀಡಿರುತ್ತದೆ. ವಸತಿ ಹೀನರು ಎಂದು ನಕಲಿ ಫಲಾನುಭವಿಗಳ ಪಟ್ಟಿಯನ್ನು ಪ್ರಾಧಿಕಾರ ತಯಾರಿಸಿದ್ದು, ಸರ್ಕಾರಿ ನೌಕರರು, ಅವರ ಕುಟುಂಬದ ಸದಸ್ಯರು, ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಖಾಯಂ ನೌಕರರು ನಿವೇಶನಗಳನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ನಿವೇಶನ ಪಡೆದ 524 ಜನರನ್ನು ತನಿಖೆಗೆ ಒಳಪಡಿಸಿ ಪ್ರಾಧಿಕಾರದ ಆಸ್ತಿಯನ್ನು ಹಿಂದೆ ಪಡೆಯುವಂತೆ ದೂರುದಾರರು ಕೋರಿರುತ್ತಾರೆ. 1 ಮತ್ತು 2ನೇ ಎದುರುದಾರರವರು ಹಂಚಿಕೆ ವೇಳೆ ದಾಖಲೆ ಪರಿಶೀಲಿಸಲು ವಿಫಲರಾಗಿರುತ್ತಾರೆ. ಒಂದೇ ಕುಟುಂಬದ 2-3 ಸದಸ್ಯರಿಗೆ ಹಂಚಿಕೆ ಮಾಡಿರುತ್ತಾರೆ. ಒಂದೇ ಫಲಾನುಭವಿಗೆ 2-3 ಕಡೆ ನಿವೇಶನ ನೀಡಿರುತ್ತಾರೆ. ಗುಡಿಸಲು ನೆಲಸಮಗೊಂಡು 20 ರಿಂದ 21 ವರ್ಷ ಕಳೆದಿದ್ದು 25 ರಿಂದ 28 ವರ್ಷ ವಯಸ್ಸುಳ್ಳವರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ಆರೋಪಿಸಿದ್ದು, ಫಲಾನುಭವಿಗಳ ಪಟ್ಟಿ ಲಗತ್ತಿಸಿರುತ್ತಾರೆ.

5. 3ನೇ ಎದುರುದಾರರವರು "ಬೆಂಗಳೂರು ಉತ್ತರ (ಅಪರ) ತಾಲ್ಲೂಕಿನಲ್ಲಿ ತಹಶೀಲ್ದಾರರಾಗಿ ದಿನಾಂಕ 23/06/2012 ರಿಂದ 17/07/2012 ರವರೆಗೂ ಮತ್ತೊಮ್ಮೆ ದಿನಾಂಕ 28/08/2012 ರಿಂದ 14/02/2013 ರವರೆಗೂ ತಹಶೀಲ್ದಾರರಾಗಿ ಕಾರ್ಯನಿರ್ವಹಿಸಿರುತ್ತೇನೆ. ಯಲಹಂಕ ಹೋಬಳಿ, ಮೇಡಿ ಅಗ್ರಹಾರ ಗ್ರಾಮದ ಸರ್ವೇ ನಂ. 24 ರಲ್ಲಿ 9-12 ಎ/ಗುಂ ಜಮೀನನ್ನು 206 ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲು ದಿನಾಂಕ 25/02/2001 ರಲ್ಲಿ ಸರ್ಕಾರ ಆದೇಶಿಸಿರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ 06/06/2001 ರಲ್ಲಿ ನಿವೇಶನ ಹಂಚಿಕೆಗೆ ಆದೇಶಿಸಿರುತ್ತಾರೆ. ಫಲಾನುಭವಿಗಳ ಪಟ್ಟಿಯನ್ನು ತಹಶೀಲ್ದಾರರು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಅನುಮೋದಿಸಿರುತ್ತಾರೆ. ಅದರಂತೆ, ರೂ.8400/-ಕ್ಕಿಂತ ವಾರ್ಷಿಕ ಆದಾಯ ಕಡಿಮೆ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಹಾಗೂ ಇತರೆ ದುರ್ಬಲ ವರ್ಗದ ನಿವೇಶನ ರಹಿತರಿಗೆ ಮುಫತ್ತಾಗಿ ನಿವೇಶನ ಹಂಚಿಕೆ ಮಾಡುವಂತೆಯೂ, ಇದಕ್ಕೂ ಮೀರಿದ ಆದಾಯ ಹೊಂದಿದವರಿಗೆ ಚದರಡಿಗೆ ರೂ.10/-ಗಳಂತೆ ದರ ನಿಗದಿಪಡಿಸಿಕೊಂಡು, ಫಲಾನುಭವಿಗಳಿಂದ ಹಣ ಪಾವತಿಸಿಕೊಂಡು, ನಿವೇಶನ ಹಂಚಿಕೆಗೆ ಅಗತ್ಯ ಕ್ರಮ ಕೈಗೊಳ್ಳಲು

ಆದೇಶಿಸಿರುತ್ತಾರೆ. ಅದರಂತೆ, ಈ ಹಿಂದೆಯೇ ಬಡಾವಣೆ ನಿರ್ಮಾಣ ಮಾಡಿ ನಿವೇಶನ ಹಂಚಿಕೆ ಮಾಡಿರುವುದು ಕಂಡು ಬರುತ್ತದೆ. ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಈ ವೇಳೆ ಫಲಾನುಭವಿಗಳ ಅರ್ಹತೆ ಬಗ್ಗೆ ತಹಶೀಲ್ದಾರರು ಹಾಗೂ ಅವರ ಕೆಳಹಂತದ ಕಂದಾಯ ಅಧಿಕಾರಿಗಳು ನೀಡಿರುವ ವರದಿಯಲ್ಲಿ ಎಲ್ಲಿಯೂ ಸಹಾ ಸದರಿ ಫಲಾನುಭವಿಗಳು ಇನ್ನಿತರೆ ಕಡೆ ನಿವೇಶನ ಹೊಂದಿರುವ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ದೂರು ಅರ್ಜಿಯಲ್ಲಿ ತಿಳಿಸಿರುವ ಫಲಾನುಭವಿಗಳಿಗೆ ನನ್ನ ಅವಧಿಯಲ್ಲಿ ಮೇಲ್ಕಂಡ ಯಲಹಂಕ ಹೋಬಳಿ, ಮೇಡಿ ಅಗ್ರಹಾರ ಗ್ರಾಮದ ಸರ್ವೆ ನಂ. 24 ರಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ" ಎಂದು ತಮ್ಮ ಪತ್ರ ದಿನಾಂಕ 18/03/2015 ರಲ್ಲಿ ತಮ್ಮ ಆಕ್ಷೇಪಣೆ ಸಲ್ಲಿಸಿರುತ್ತಾರೆ.

6. ಫಿರ್ಯಾದುದಾರರ ಪತ್ರ ದಿನಾಂಕ 07/10/2013 ರಲ್ಲಿ 1ನೇ ಎದುರುದಾರರವರು ಸೇವೆಯಿಂದ ನಿವೃತ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ. ಕಡತದಲ್ಲಿ ಲಭ್ಯವಾದ ಮಾಹಿತಿಯಿಂದ 2ನೇ ಎದುರುದಾರರವರು ದಿನಾಂಕ 31/05/2014 ರಂದು ನಿವೃತ್ತಿ ಹೊಂದಿರುವುದಾಗಿ ಕಂಡು ಬಂದಿರುತ್ತದೆ.

7. 1 ಮತ್ತು 2ನೇ ಎದುರುದಾರರವರ ಆಕ್ಷೇಪಣೆಗಳನ್ನು ಸ್ವೀಕರಿಸಿಲ್ಲ. ಫಿರ್ಯಾದುದಾರರು 3ನೇ ಎದುರುದಾರರವರ ಆಕ್ಷೇಪಣೆಗೆ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

8. ಕಡತದಲ್ಲಿ ಲಭ್ಯವಿರುವ ಆಧಾರಗಳನ್ನು ಪರಿಶೀಲಿಸಲಾಗಿ ದೂರು ಕೊಡುವ 2013ರ ಅವಧಿಗೆ ಪೂರ್ವದಲ್ಲಿ ಅಂದರೆ 20-21 ವರ್ಷಗಳ ಹಿಂದೆ ಬಿ.ಡಿ.ಎ ಬಡಾವಣೆಗಳನ್ನು ನಿರ್ಮಿಸಲು ಗುಡಿಸಲುಗಳನ್ನು ನೆಲಸಮಗೊಳಿಸಿದ್ದು ಯಲಹಂಕ ಹೋಬಳಿ ಮೇಡಿ ಅಗ್ರಹಾರದ ಸರ್ವೇ ನಂಬರ್ 24 ರಲ್ಲಿ 206 ನಿವೇಶನಗಳನ್ನು 2008 ರಿಂದ 2012 ರವರೆಗೆ ದಲಿತ ಕ್ರಿಯಾ ಸಮಿತಿಯ ನಿವೇಶನ ರಹಿತರಿಗೆ ಹಂಚಿಕೆ ಮಾಡಿರುತ್ತಾರೆ. ನಿವೇಶನವನ್ನು ಹಂಚುವ ಬಗ್ಗೆ ಇರುವ ಆದೇಶ ದಿನಾಂಕ 06/06/2001 ರ ಅಧಿಕೃತ ಜ್ಞಾಪ ದಾಖಲೆ ಪರಿಶೀಲಿಸಲಾಗಿ ನಿವೇಶನ ಹೊಂದುವ ಫಲಾನುಭವಿಗಳಿಗೆ ಗಂಡ, ಹೆಂಡತಿ ಹೆಸರಿನಲ್ಲಿ ಜಂಟಿಯಾಗಿ ಹಕ್ಕು ಪತ್ರ ವಿತರಿಸಲು ಷರತ್ತು ವಿಧಿಸಿರುವುದು ಕಂಡು ಬಂದಿರುತ್ತದೆ.

9. ದೂರಿನೊಂದಿಗೆ 30 ಜನರು ನಿವೇಶನ ಪಡೆದಿರುವ ಫಲಾನುಭವಿಗಳ ಪಟ್ಟಿಯನ್ನು ಲಗತ್ತಿಸಿದ್ದು, ಸದರಿಯವರ ಹೆಸರು, ನಿವೇಶನ ನಂ. ಫಲಾನುಭವಿಯ ಯಾವ ಸಂಬಂಧಿ ಸರ್ಕಾರಿ ನೌಕರರಿರುತ್ತಾರೆ, ಒಂದೇ ಕುಟುಂಬದ ಯಾವ ಯಾವ ಸದಸ್ಯರಿರುತ್ತಾರೆ, 26 ವರ್ಷಕ್ಕಿಂತ ಕಡಿಮೆ ವಯಸ್ಸಿನ ಫಲಾನುಭವಿಗಳು ಯಾರು ಯಾರು ಇರುತ್ತಾರೆ ಎಂದು ಮಾಹಿತಿಯನ್ನು ದೂರುದಾರರು ಸದರಿ ದಾಖಲೆಯಲ್ಲಿ ನೀಡಿರುತ್ತಾರೆ.

| ಕ್ರ.ಸಂ. | ಫಲಾನುಭವಿ ಹೆಸರು | ಮೇಡಿ ಅಗ್ರಹಾರ ಸರ್ವೇ ನಂ. 24ರ ನಿವೇಶನ ಸಂಖ್ಯೆ | ಪದವಿ, ವಾಸ ಸ್ಥಳಗಳು ಮತ್ತು ಸಂಬಂಧಗಳು |
|---|---|---|---|
| 1. | ಎಲ್ಲಮ್ಮ ಬಿನ್ ನಂದೆಪ್ಪ ಲೇಟ್ ನರಸಿಂಹಯ್ಯ ನವರ ಧರ್ಮಪತ್ನಿ | 15 | ಲೇಟ್ ನರಸಿಂಹಯ್ಯ, ನಿವೃತ್ತ ಅಭಿಯಂತರರು, ಕೆ.ಇ.ಬಿ. |

| | | | |
|---|---|---|---|
| | | | ನಂ. 50, ಲೋಯರ್ ಪ್ಯಾಲೇಸ್ ಆಚೆ, ಬೆಂಗಳೂರು-560003, ಸದರಿ ವಿಳಾಸದಲ್ಲಿ ಸ್ವಂತ ಮನೆಯನ್ನು ಹೊಂದಿರುತ್ತಾರೆ. |
| 2. | ಬಿ.ಎನ್. ಅನಸೂಯ ಬಿನ್ ಲೇಟ್ ನರಸಿಂಹಯ್ಯ | 158 | ಸಹಾಯಕ ಲೆಕ್ಕಾಧಿಕಾರಿಗಳು, ನಿವೃತ್ತ (ಬೆಸ್ಕಾಂ) |
| 3. | ಬಿ.ಎನ್. ದ್ವಾರಕಾನಾಥ್ ಬಿನ್ ಲೇಟ್ ನರಸಿಂಹಯ್ಯ | 24ರ ಪಟ್ಟಿಯಲ್ಲಿರುತ್ತದೆ | ಲೋಕೋಪಯೋಗಿ ಇಲಾಖೆ ಕಿರಿಯ ಅಭಿಯಂತರರು ಕೋಲಾರ ಜಿಲ್ಲೆ |
| 4. | ಕೌಸಲ್ಯ ಕೋಂ ಪಿ.ಚನ್ನಪ್ಪ | 18 | ಈಕೆಯ ಪತಿ ಪಶುವೈದ್ಯಾಧಿಕಾರಿ, ಈತನ ಹೆಸರಿನಲ್ಲಿ ಬಿಡಿಎ ನಿವೇಶನ ಇರುತ್ತದೆ. |
| 5. | ಬಸವರಾಜು ಬಿನ್ ಮುನಿಸ್ವಾಮಿ | 124 | ಬಿಎಂಟಿಸಿ ನೌಕರ (ಎ.ಟಿ.ಐ) ಶಿವಾಜಿನಗರ ಬಸ್ ನಿಲ್ದಾಣ |
| 6 | ಸುಮಿತ್ರಾದೇವಿ, ಬಿನ್ ಶ್ರೀನಿವಾಸ್ | 78 | ಇಬರಿಬ್ಬರೂ ಒಂದೇ ಕುಟುಂಬದ ಸದಸ್ಯರು |
| 7 | ರಾಮಯ್ಯ ಬಿನ್ ಪೆದ್ದಣ್ಣ | 65 | |
| 8 | ಆರ್. ನಾಗರಾಜ್ ಬಿನ್ ರಾಮಯ್ಯ | 101 | ಬೆಸ್ಕಾಂನಲ್ಲಿ ಜೆ.ಇ, (ತಲಘಟ್ಟಪುರ) ಇವರಿಬ್ಬರೂ ಒಂದೇ ಕುಟುಂಬದ ಸದಸ್ಯರು |
| 9 | ಶ್ರೀ ರಂಗಪ್ಪ ಬಿನ್ ಚಿನ್ನಪ್ಪ | 21 | ನಿವೃತ್ತ ಆರಕ್ಷಕರು ಕೆ.ಜಿ.ಎಫ್ |
| 10 | ಕೃಷ್ಣಮ್ಮ ಕೋಂ ಶ್ರೀರಂಗಪ್ಪ | 19 | |
| 11 | ಶಕುಂತಲ ಬಿನ್ ಶ್ರೀರಂಗಪ್ಪ | 20 | ಬಿ.ಎಂ.ಟಿ.ಸಿ ಕಾನೂನು ಅಧಿಕಾರಿ ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು |
| 12 | ಜಿ.ಎಸ್. ರಾಮಮೂರ್ತಿ ಬಿನ್ ಹನುಮಂತಯ್ಯ | 115 | |
| 13 | ಸಿದ್ದಲಕ್ಷ್ಮಮ್ಮ ಬಿನ್ ಹನುಮಯ್ಯ | 109 | ಎಲ್ಲರೂ ಒಂದೇ ಕುಟುಂಬದ ಸದಸ್ಯರು |
| 14 | ಷಣ್ಮುಗಂ ಬಿನ್ ವೇಲಾಯುಧಂ | ಮೇಡಿ ಅಗ್ರಹಾರದ 24ರ ಪಟ್ಟಿಯಲ್ಲಿದೆ | ನಿವೃತ್ತ ಬಿಇಎಲ್ ನೌಕರರು |
| 15 | ರಾಣಿ ಕೋಂ ಷಣ್ಮುಗಂ | | |
| 16 | ಶುಭಶ್ರೀ ಬಿನ್ ಷಣ್ಮುಗಂ | | ಎಲ್ಲರೂ ಒಂದೇ ಕುಟುಂಬದ ಸದಸ್ಯರು, ಬಿಡಿಎ ಮತ್ತು ರೆವಿನ್ಯೂ ಎರಡೂ ಕಡೆ ಸೈಟುಗಳನ್ನು ಪಡೆದಿರುತ್ತಾರೆ. |
| 17 | ಕೃಷ್ಣಮ್ಮ ಕೋಂ ಲೇಟ್ ಎಲ್ಲಪ್ಪ | | |

| | | | |
|---|---|---|---|
| 18 | ಕೆ.ವೈ. ಮೂರ್ತಿ ಬಿನ್ ಲೇಟ್ ಎಲ್ಲಪ್ಪ | | |
| 19 | ಕಲಾವತಿ ಬಿನ್ ಮುನಿವೆಂಕಟಪ್ಪ | | ಎಲ್ಲರೂ ಒಂದೇ ವಿಳಾಸ ನೀಡಿದ್ದು, ಪಡಿತರ ಚೀಟಿಯಲ್ಲಿ ಮೂರು ಜನರ ಹೆಸರು ಒಟ್ಟಿಗೆ ಇರುತ್ತದೆ ಮತ್ತು ಒಂದೇ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. |
| 20 | ಮುನಿರಾಜು | | ನಿವೃತ್ತ ಐಟಿಐ ನೌಕರ, ಮಾಜಿ ಬಿಟಂಟಿಸಿ ನಾಮ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ ಕಾಂಗ್ರೆಸ್ ಪದಾಧಿಕಾರಿ, ವಸಂತನಗರ. |
| 21 | ಮುನಿಯಲ್ಲಮ್ಮ ಬಿನ್ ಮುನಿಯಪ್ಪ | 188 | ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು |
| 22 | ವಿ.ಎಂ. ಗಣೇಶ್ ಬಿನ್ ಮುನಿರಾಜು | | ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು |
| 23 | ವಿ.ಎಂ. ಹರೀಶ್ | | ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು |
| 24 | ಪದ್ಮ ಕೋಂ ಬರಮಯ್ಯ | | ಈಕೆ ಬಿಡಿಎಯಲ್ಲಿ ಎರಡೂ ಕಡೆ ಏಕಕಾಲದಲ್ಲಿ ನಿವೇಶನ ಹೊಂದಿದವರಾಗಿರುತ್ತಾರೆ. |
| 25 | ಅಂಕಮ್ಮ ಕೋಂ ಪಾಪಯ್ಯ | | ಬಿಡಿಎ ದ 46ರ ಪಟ್ಟಿಯಲ್ಲಿ ನಿವೇಶನ ಹೊಂದಿದ್ದು ಮತ್ತು 98ರ ಪಟ್ಟಿ ಕೋರಮಂಗಲ ಶ್ರೀನಿವಾಗಲು ಪಟ್ಟಿಯಲ್ಲೂ ಸಹ ಅನುಮೋದನೆಗೊಂಡಿರುತ್ತದೆ |
| 26 | ಗಂಗಮ್ಮ ಕೋಂ ಮುನಿಯಪ್ಪ | | 98ರ ಪಟ್ಟಿಯಲ್ಲಿ ಇವರ ಹೆಸರು ಅನುಮೋದನೆಗೊಂಡಿರುತ್ತದೆ. |
| 27 | ನಾಗರಾಜು ಬಿನ್ ಲೇಟ್ ಕೃಷ್ಣಮೂರ್ತಿ | | 26 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಇವರನ್ನು ಪುನರ್ವಸತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ನಿವೇಶನ ಕಳೆದುಕೊಂಡವರ ಪಟ್ಟಿ 21 ವರ್ಷಗಳ ಹಿಂದಿನದು ಎಂದು ತಿಳೀಸಲಾಗಿದ್ದು, ಅನುಮಾನಾಸ್ಪದವಾಗಿದೆ? |
| 28 | ಜನಾರ್ಧನ್ ಬಿನ್ ನಾಗರಾಜು | | 26 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಇವರನ್ನು ಪುನರ್ವಸತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ನಿವೇಶನ ಕಳೆದುಕೊಂಡವರ |

| | | | |
|---|---|---|---|
| | | | ಪಟ್ಟಿ 21 ವರ್ಷಗಳ ಹಿಂದಿನದು ಎಂದು ತಿಳಿಸಲಾಗಿದ್ದು, ಅನುಮಾನಾಸ್ಪದವಾಗಿದೆ? |
| 29 | ಹೆಚ್. ಅಜಯ್ ಬಿನ್ ಟಿ. ಹನುಮಂತಪ್ಪ | | 26 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಇವರನ್ನು ಪುನರ್ವಸತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ನಿವೇಶನ ಕಳೆದುಕೊಂಡವರ ಪಟ್ಟಿ 21 ವರ್ಷಗಳ ಹಿಂದಿನದು ಎಂದು ತಿಳಿಸಲಾಗಿದ್ದು, ಅನುಮಾನಾಸ್ಪದವಾಗಿದೆ? |
| 30 | ಟಿ. ಹನುಮಂತರಾಯಪ್ಪ ಬಿನ್ ಲೇಟ್ ವೀರ ಹನುಮಯ್ಯ | | ತಂದೆ ಮತ್ತು ಮಗ ಒಂದೇ ಕುಟುಂಬದವರಾಗಿದ್ದು, ಬಿಡಿಎ ಪ್ರಾಧಿಕಾರದಲ್ಲಿ ನೌಕರರಾಗಿರುವ ಡಿ.ಎಸ್-1 ಇಲಾಖೆಯ ಗುಮಾಸ್ತ ಹನುಮಯ್ಯ ನವರ ಸಂಬಂಧಿಕರು ಆಗಿರುತ್ತಾರೆ. |

10. ದೂರಿನೊಂದಿಗೆ ಹಾಜರ್ಪಡಿಸಿರುವ ಫಲಾನುಭವಿಗಳಿಗೆ ನೀಡಿರುವ ನಿವೇಶನದ ಹಕ್ಕು ಪತ್ರಗಳನ್ನು ಪರಿಶೀಲಿಸಲಾಗಿ, ಸದರಿ ಹಕ್ಕು ಪತ್ರದಲ್ಲಿ ತಹಶೀಲ್ದಾರರು ಷರತ್ತುಗಳನ್ನು ವಿಧಿಸಿದ್ದು, ಸದರಿ ಷರತ್ತುಗಳನ್ನು ಪರಿಶೀಲಿಸಲಾಗಿ ಸರ್ಕಾರಿ ಆದೇಶದಲ್ಲಿ ನಮೂದಿಸಿರುವ ಅಂಶಗಳಿಗೆ ವಿರುದ್ಧವಾಗಿ ತಪ್ಪು ಮಾಹಿತಿ, ಸುಳ್ಳು ಮಾಹಿತಿ ನೀಡಿದಲ್ಲಿ ಅಂತಹ ಮಂಜೂರಾತಿಯನ್ನು ಯಾವುದೇ ತಿಳುವಳಿಕೆ ನೀಡದೆ ರದ್ದುಪಡಿಸಿ ಸರ್ಕಾರಕ್ಕೆ ವಾಪಸ್ಸು ಪಡೆಯಲಾಗುವುದು. ಹಾಗೂ ನಿರ್ಮಾಣವಾದಂತಹ ಮನೆಯನ್ನು ನಿವೇಶನದ ಸಹಿತ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಷರತ್ತು ವಿಧಿಸಿರುತ್ತಾರೆ.

11. ಸುಳ್ಳು ಮಾಹಿತಿ ನೀಡಿದ್ದಾರೆಂದು ಆರೋಪಿಸಿರುವ 30 ಜನ ಫಲಾನುಭವಿಗಳ ಪಟ್ಟಿಯಲ್ಲಿರುವ ಹೆಸರುಗಳಲ್ಲಿ ಕ್ರ.ಸಂ. 1, 3, 5, 7, 8, 13, 14 ರವರಿಗೆ 3ನೇ ಎದುರುದಾರರವರು ತಮ್ಮ ಕರ್ತವ್ಯದ ಅವಧಿಯಲ್ಲಿ ಹಂಚಿಕೆ ಮಾಡಿರುವುದಿಲ್ಲವೆಂದು ತಮ್ಮ ಆಕ್ಷೇಪಣೆಯಲ್ಲಿ ಹೇಳಿದ್ದು ಉಳಿದ 23 ಫಲಾನುಭವಿಗಳು ಸುಳ್ಳು ಮಾಹಿತಿ ನೀಡಿ ನಿವೇಶನ ಪಡೆದ ಬಗ್ಗೆಯೂ ಆರೋಪವಿದ್ದು, ಈ ಬಗ್ಗೆ 3ನೇ ಎದುರುದಾರರವರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. 3ನೇ ಎದುರುದಾರರವರ ಕಛೇರಿಯಲ್ಲಿ ಈವರೆಗೂ ಸುಳ್ಳು ಮಾಹಿತಿ ನೀಡಿದ ಸದರಿ 30 ಫಲಾನುಭವಿಗಳ ವಿರುದ್ಧ ಹಕ್ಕು ಪತ್ರದಲ್ಲಿ ವಿಧಿಸಿರುವ ಷರತ್ತು ಉಲ್ಲಂಘಿಸಿದ್ದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಹಾಗೂ ದೂರಿನಲ್ಲಿ ಮಾಡಿರುವ ಆರೋಪಗಳು ಮೇಲ್ನೋಟಕ್ಕೆ ಸತ್ಯವೆಂದು ಕಂಡು ಬಂದಿರುತ್ತದೆ.

12. ಮೇಡಿ ಅಗ್ರಹಾರ ಸರ್ವೇ ನಂಬರ್ 24ರ ನಿವೇಶನ ಸಂಖ್ಯೆ: 15, 158, ಶ್ರೀ ಬಿ.ಎನ್. ದ್ವಾರಕಾನಾಥ್ ಬಿನ್ ಲೇಟ್ ನರಸಿಂಹಯ್ಯ ರವರ ನಿವೇಶನ, 18, 124, 78, 65, 101, 21, 19, 20, 115, 109, ಶ್ರೀ ಷಣ್ಮುಗಂ ಬಿನ್ ವೇಲಾಯುಧಂ ರವರ ನಿವೇಶನ, ರಾಣಿ ಕೋಂ ಷಣ್ಮುಗಂ ರವರ ನಿವೇಶನ ಶುಭಶ್ರೀ ಬಿನ್ ಷಣ್ಮುಗಂ ರವರ ನಿವೇಶನ, ಕೃಷ್ಣಮ್ಮ ಕೋಂ ಲೇಟ್ ಎಲ್ಲಪ್ಪ ರವರ ನಿವೇಶನ, ಕೆ.ವೈ.ಮೂರ್ತಿ ಬಿನ್ ಲೇಟ್ ಎಲ್ಲಪ್ಪ ರವರ ನಿವೇಶನ, ಕಲಾವತಿ ಬಿನ್ ಮುನಿವೆಂಕಟಪ್ಪ ರವರ ನಿವೇಶನ, ಮುನಿರಾಜು ರವರ ನಿವೇಶನ, 188, ವಿ.ಎಂ. ಗಣೇಶ್ ಬಿನ್ ಮುನಿರಾಜು ರವರ ನಿವೇಶನ, ವಿ.ಎಂ. ಹರೀಶ್ ರವರ ನಿವೇಶನ, ಪದ್ಮ ಕೋಂ ಬರಮಯ್ಯ ರವರ ನಿವೇಶನ, ಅಂಕಮ್ಮ ಕೋಂ ಪಾಪಯ್ಯ ರವರ ನಿವೇಶನ, ಗಂಗಮ್ಮ ಕೋಂ ಮುನಿಯಪ್ಪ ರವರ ನಿವೇಶನ, ನಾಗರಾಜು ಬಿನ್ ಲೇಟ್ ಕೃಷ್ಣಮೂರ್ತಿ ರವರ ನಿವೇಶನ, ಜನಾರ್ಧನ್ ಬಿನ್ ನಾಗರಾಜು ರವರ ನಿವೇಶನ, ಹೆಚ್. ಅಜಯ್ ಬಿನ್ ಟಿ. ಹನುಮಂತಪ್ಪ ರವರ ನಿವೇಶನ, ಟಿ. ಹನುಮಂತರಾಯಪ್ಪ ಬಿನ್ ಲೇಟ್ ವೀರ ಹನುಮಯ್ಯ ಈ ಎಲ್ಲಾ ಫಲಾನುಭವಿಗಳು ಸುಳ್ಳು ಮಾಹಿತಿ ನೀಡಿ ಹಕ್ಕು ಪತ್ರಗಳನ್ನು ಪಡೆದು ಹಕ್ಕು ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದ್ದರೂ 3ನೇ ಎದುರುದಾರರು ಸದರಿಯವರ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಯಾವುದೇ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

13. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹಕ್ಕು ಪತ್ರದಲ್ಲಿ ವಿಧಿಸಿರುವ ಷರತ್ತಿಗೆ ವಿರುದ್ಧವಾಗಿ ತಪ್ಪು ಮಾಹಿತಿ, ಸುಳ್ಳು ಮಾಹಿತಿಗಳನ್ನು ನೀಡಿ ನಿವೇಶಗಳನ್ನು ಮಂಜೂರು ಮಾಡಿಸಿಕೊಂಡು ಹಕ್ಕುಪತ್ರಗಳನ್ನು ಪಡೆದ ಫಲಾನುಭವಿಗಳ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಿ, ಸದರಿ ನಿವೇಶನಗಳನ್ನು ಸರ್ಕಾರದ ವಶಕ್ಕೆ ಹಿಂದೆ ಪಡೆಯಲು ಹಾಗೂ ನಿರ್ಮಾಣವಾದಂತಹ ಮನೆಗಳನ್ನು ನಿವೇಶನದ ಸಹಿತ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಮೂರು ತಿಂಗಳೊಳಗೆ ಕ್ರಮ ಕೈಗೊಂಡು, ಕೈಗೊಂಡ ಕ್ರಮವನ್ನು ಈ ಸಂಸ್ಥೆಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 24/2

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**